ಶ್ರೀ ಡಿ ಸುಧಾಕರ: ಮಾನ್ಯ ಅಧ್ಯಕ್ಷರೆ, ನಿಗಮಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ಈಗಾಗಲೇ ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ವಿಷಯವಾಗಿ ಮಂಗಳೂರಿಗೆ ಸಂಬಂಧಪಟ್ಟಂತೆ ಹೇಳುವುದಾದರೆ ಮುಂದಿನ ತಿಂಗಳೊಳಗೆ ಈ ಕಚೇರಿಯನ್ನು ಪ್ರಾರಂಭ ಮಾಡಿ ಇರುವ ಹುದ್ದೆಗಳನ್ನು ತುಂಬುವುದಕ್ಕೆ ನಾನು ಕ್ರಮ ತೆಗೆದುಕೊಳ್ಳುತ್ತೇನೆಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ಹೇಳಬಯಸುತ್ತೇನೆ.

57(448) ಶ್ರೀ ಹ್ಯಾರಿಸ್ ಎನ್ ಎ:(ಶಾಂತಿನಗರ) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ವಾಜಪೇಯಿ ಆರೋಗ್ಯ ಶ್ರೀ ಯೋಜನೆಯ ಅನುಷ್ಠಾನದ ವಿವರಗಳೇನು;

ಆ) ಈ ಯೋಜನಾ ಸೌಲಭ್ಯಗಳನ್ನು ಎಲ್ಲಾ ಜಿಲ್ಲೆಗಳಿಗೂ ಅನ್ವಯಿಸಲಾಗಿದೆಯೇ;

ಇ) ಯೋಜನೆಯ ಫಲಾನುಭವಿಗಳಿಗೆ ನಿಗದಿಪಡಿಸಲಾದ ಅರ್ಹತೆಗಳೇನು;

ಶ್ರೀ ಬಿ ಶ್ರೀರಾಮುಲು(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಈ ಯೋಜನೆಯಡಿ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ 402 ವಿವಿಧ ಆಘಾತಕಾರಿ ಕಾಯಿಲೆಗಳಿಗೆ ಅಂದರೆ, ಹೃದ್ರೋಗ, ಕ್ಯಾನ್ಸರ್, ನರರೋಗ, ಮೂತ್ರಪಿಂಡದ ತೊಂದರೆ, ಸುಟ್ಟಗಾಯ ಪಾಲಿಟ್ರಾಮ ಇತ್ಯಾದಿಗಳಿಗೆ ಗುರುತಿಸಲ್ಪಟ್ಟ ಆಸ್ಪತ್ರೆಗಳಲ್ಲಿ ಉಚಿತವಾಗಿ ವೈದ್ಯಕೀಯ ಚಿಕಿತ್ಸೆಯನ್ನು ಪ್ರತಿ ಕುಟುಂಬಕ್ಕೆ ಫ್ಯಾಮಿಲಿ ಫ್ಲೋಟರ್ (family floater) ಅಧಾರದ ಮೇಲೆ 1,50,000/– ರಿಂದ 2,00,000/– ರೂ.ಗಳಿಗೆ ಸೀಮಿತವಾಗಿ ನೀಡಲಾಗುತ್ತಿದೆ.

ಆ) ಇಲ್ಲ. ಗುಲ್ಬರ್ಗಾ ಕಂದಾಯ ವಿಭಾಗದ 6 ಜಿಲ್ಲೆಗಳಾದ ಬೀದರ್, ಗುಲ್ಬರ್ಗ, ಯಾದಗಿರ್, ರಾಯಚೂರು, ಬಳ್ಳಾರಿ ಮತ್ತು ಕೊಪ್ಪಳ ಜಿಲ್ಲೆಗಳಲ್ಲಿ ಈ ಯೋಜನೆಯು ಅನುಷ್ಠಾನಗೊಳ್ಳುತ್ತಿದೆ.

ಇ) ಬಿ.ಪಿ.ಎಲ್. ಕಾರ್ಡ್‌ದಾರರಿಗೆ ಸೌಲಭ್ಯವನ್ನು ಒದಗಿಸುವುದರ ಜೊತೆಗೆ ಮಧ್ಯಮ ಮತ್ತು ಆರ್ಥಿಕವಾಗಿ ಹಿಂದುಳಿದವರಿಗೂ ಯೋಜನೆಯ ಸೌಕರ್ಯ ವನ್ನು ಒದಗಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಈ ಸೌಲಭ್ಯ ಪಡೆಯಲು ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯ ಬಿ.ಪಿ.ಎಲ್. ಪಡಿತರ ಚೀಟಿ ಹೊಂದಿರಬೇಕು.

ಮಧ್ಯಮ ಹಾಗೂ ಆರ್ಥಿಕವಾಗಿ ಹಿಂದುಳಿದವರಿಗೆ ಈ ಯೋಜನೆಯ ಸೌಕರ್ಯವನ್ನು ಒದಗಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

ಶ್ರೀ ಎನ್ ಎ ಹ್ಯಾರಿಸ್: ಮಾನ್ಯ ಅಧ್ಯಕ್ಷರೆ, ಈ ವಾಜಪೇಯಿ ಆರೋಗ್ಯ ಶ್ರೀ ಯೋಜನೆ ಏನು ಇದೆ. ಇದು ಕೇವಲ ಕೆಲವೇ ಜಿಲ್ಲೆಗಳಲ್ಲಿ ಮಾತ್ರ ಇದೆ. ಇದನ್ನು ಕರ್ನಾಟಕ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಸಿಗುವ ಹಾಗೆ ಮಾಡಬೇಕಾಗುತ್ತದೆ, ಏಕೆಂದರೆ ಈ ಯೋಜನೆ ಮುಖಾಂತರ ಸುಮಾರು ಜನರಿಗೆ ಅನುಕೂಲವಾಗುತ್ತದೆ. ಈ ಯೋಜನೆಯಲ್ಲಿ 402 ವಿವಿಧ ಖಾಯಿಲೆಗಳಿಗೆ ಜನರಿಗೆ ಚಿಕಿತ್ಸೆ ಪಡೆಯುವ ಅನುಕೂಲವಿದೆ. ಅದುದರಿಂದ ಈ ಯೋಜನೆಯನ್ನು ಇಡೀ ಕರ್ನಾಟಕ ಜಿಲ್ಲೆಯಲ್ಲಿ ಅನುಷ್ಠಾನಗೊಳಿಸಿದರೆ ಎಲ್ಲರಿಗೂ ಅನುಕೂಲವಾಗುತ್ತದೆಂದು ನಾನು ಹೇಳಲಿಚ್ಛಿಸುತ್ತೇನೆ. ಈ ಬಗ್ಗೆ ಮಾನ್ಯ ಸಚಿವರು ದಯವಿಟ್ಟು ಉತ್ತರ ನೀಡಬೇಕು.

ಶ್ರೀ ಬಿ ಶ್ರೀರಾಮುಲು: ಮಾನ್ಯ ಅಧ್ಯಕ್ಷರೆ, ಈ ವಾಜಪೇಯಿ ಆರೋಗ್ಯ ಶ್ರೀ ಯೋಜನೆಯನ್ನು ಏನು ಜಾರಿಗೆ ತಂದಿದ್ದೇವೆ. ಈ ಯೋಜನೆಯನ್ನು ದಿನಾಂಕ:31.07.2007ರಲ್ಲಿ ಬಳ್ಳಾರಿಯಲ್ಲಿ ಪ್ರಾರಂಭಗೊಳಿಸಲಾಯಿತು. ಈ ಯೋಜನೆಯನ್ನು ಸೀಮಿತವಾಗಿ ಹೈದರಬಾದ್ ಕರ್ನಾಟಕ ಜಿಲ್ಲೆಗಳಾದ ಬಳ್ಳಾರಿ, ಗುಲ್ಬರ್ಗ, ಬೀದರ್, ರಾಯಚೂರು, ಕೊಪ್ಪಳ, ಬಿಜಾಪುರ ಒಟ್ಟು 6 ಜಿಲ್ಲೆಗಳಲ್ಲಿ ಜಾರಿಗೆ ತಂದಿದ್ದೇವೆ. ಈ ಯೋಜನೆಯ ಉದ್ದೇಶವೇನೆಂದರೆ ಬಡತನ ರೇಖೆಗಿಂತ ಕೆಳಗಿರುವಂಥ ಜನರಿಗೆ ಈ 6 ಜಿಲ್ಲೆಗಳಲ್ಲಿ ಒಟ್ಟು 16 ಲಕ್ಷ ಕುಟುಂಬಗಳಿಗೆ ಸುಮಾರು 48 ಕೋಟಿ ರೂಪಾಯಿಗಳನ್ನು ತೆಗೆದಿಟ್ಟಿದ್ದೇವೆ. ಈ ಬಡತನ ರೇಖೆಗಿಂತ ಕೆಳಗಿರುವಂಥ ಜನರಿಗೆ ಏನಾದರೂ ಖಾಯಿಲೆಗಳು ಬಂದರೆ ದೊಡ್ಡ ದೊಡ್ಡ Super Speciality Hospital ಗಳಿಗೆ

ಹೋಗುವುದಕ್ಕೆ 86 ಆಸ್ಪತ್ರೆಗಳನ್ನು ಗುರುತಿಸಿದ್ದೇವೆ. ಇಲ್ಲಿ ಬಡಬರಿಗೆ ಏನಾದರೂ ಖಾಯಿಲೆಗಳು ಬಂದರೆ ಅಲ್ಲಿಗೆ ಹೋಗಿ admit ಆಗಿ discharge ಆಗುವವರೆಗೂ ಆಗುವ ಚಿಕಿತ್ಸೆಯ ಖರ್ಚು ಎರಡು ಲಕ್ಷ ರೂಪಾಯಿಗಳವರೆಗಿನ ವೆಚ್ಚವನ್ನು ಸರ್ಕಾರವೇ ಕೊಡುವ ವ್ಯವಸ್ಥೆ ಈ ವಾಜಪೇಯಿ ಆರೋಗ್ಯಶ್ರೀ ಯೋಜನೆಯಲ್ಲಿ ಆಗಿದೆ. ಮಾನ್ಯ ಸದಸ್ಯರು ಈ ಯೋಜನೆಯನ್ನು ರಾಜ್ಯದಾದ್ಯಂತ ಮಾಡಬೇಕೆಂಬ ಪ್ರಸ್ತಾವನೆಯನ್ನು ಏನು ಸಲ್ಲಿಸಿದರು. ಅದನ್ನು ಈ 6 ಜಿಲ್ಲೆಗಳ ಸಾಧಕ ಬಾಧಕಗಳನ್ನು ನೋಡಿಕೊಂಡು ಮುಂಬರುವ ದಿವಸಗಳಲ್ಲಿ ರಾಜ್ಯದ ಎಲ್ಲಾ ಡಿವಿಜನ್‌ಗಳಲ್ಲೂ ವಾಜಪೇಯಿ ಆರೋಗ್ಯ ಶ್ರೀ ಯೋಜನೆಯನ್ನು ವಿಸ್ತರಣೆ ಮಾಡುವಂಥ ಕೆಲಸವನ್ನು ಮಾಡಿ ಕೊಡುತ್ತೇನೆ.

ಅಧ್ಯಕ್ಷರು: ಮಾನ್ಯ ಕೆ.ಅಭಯ ಚಂದ್ರ ಜೈನ್‌ರವರೆ ತಾವು ಪ್ರಶ್ನೆಯನ್ನು ಕೇಳಿ.

ಶ್ರೀ ಎನ್ ಎ ಹ್ಯಾರಿಸ್: ಮಾನ್ಯ ಸಚಿವರೆ, ಈ ವರ್ಷದಲ್ಲೆ ಯೋಜನೆಯನ್ನು ಜಾರಿಗೆ ತನ್ನಿ.

ಅಧ್ಯಕ್ಷರು: ತಾವು ಬೇಡಿಕೆಗಳ ಮೇಲೆ ಮಾತನಾಡುವಾಗ ಕೇಳಿ. ಈಗ ಇಡೀ ರಾಜ್ಯಕ್ಕೆ ಸಂಬಂಧಪಟ್ಟಂತೆ ಕೇಳುವುದಕ್ಕೆ ಆಗುವುದಿಲ್ಲ. ಈಗ ಮಾನ್ಯ ಮಂತ್ರಿಯವರು ಉತ್ತರ ಹೇಳಿದ್ದಾರೆ. ನಾನು ಈಗ ಮಾನ್ಯ ಅಭಯಚಂದ್ರ ಜೈನ್‌ರವರನ್ನು ಕರೆದಿದ್ದೇನೆ, ಅವರು ಪ್ರಶ್ನೆಯನ್ನು ಕೇಳಲಿ. ಈಗ ಸಮಯ ಆಗಿದೆ, ತಾವು ಬೇಡಿಕೆ ಮೇಲೆ ಮಾತನಾಡುವಾಗ ಕೇಳಿ.

(ಗೊಂದಲ)

ಅಧ್ಯಕ್ಷರು: ಎಲ್ಲರೂ ಎದ್ದು ನಿಂತರೆ ಆಗುವುದಿಲ್ಲ, ಕುಳಿತುಕೊಳ್ಳಿ. ಪ್ರಶ್ನೋತ್ತರ ಸಮಯ ಆಗಿ ಹೋಗಿದೆ. ತಾವು ಪ್ರಶ್ನೆ ಕೇಳದಿದ್ದರೆ ಮುಂದಿನ ಕಲಾಪಕ್ಕೆ ಹೋಗಬೇಕಾಗುತ್ತದೆ, ಉಳಿದವರಿಗೆ ಪ್ರಶ್ನೆ ಕೇಳುವುದಕ್ಕೆ ಅವಕಾಶವಾಗುವುದಿಲ್ಲ.

ಶ್ರೀ ಎನ್ ಎ ಹ್ಯಾರಿಸ್: ಮಾನ್ಯ ಅಧ್ಯಕ್ಷರೆ, ನಾನು ಪ್ರಶ್ನೆಯನ್ನು ಕೇಳಿದರೂ ಮಾತನಾಡುವುದಕ್ಕೆ ಬಿಡದಿದ್ದರೆ ನಾವು ಏನು ಮಾಡುವುದು? ಸರ್ ಒಂದು ನಿಮಿಷ ಕೊಡಿ.

ಅಧ್ಯಕ್ಷರು: ತಮ್ಮ ಪ್ರಶ್ನೆ ಬಹಳ simple ಆಗಿದ್ದು, ಈ ಯೋಜನೆ ಇಡೀ ರಾಜ್ಯಕ್ಕೆ ಅನ್ವಯವಾಗಬೇಕೆಂದು ಇದೆ. ಅದಕ್ಕೆ ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ, ತಾವು ಕುಳಿತುಕೊಳ್ಳಿ.

ಶ್ರೀ ಎನ್ ಎ ಹ್ಯಾರಿಸ್: ನೀವು ಈ ರೀತಿ ಹೇಳಿದರೆ ನಾವು ಏಕೆ ಪ್ರಶ್ನೆಯನ್ನು ಕೇಳಬೇಕು?

ಅಧ್ಯಕ್ಷರು: ಆಯಿತು.

ಶ್ರೀ ಎನ್ ಎ ಹ್ಯಾರಿಸ್: ಏನು ಆಯಿತು? ನಾವು ಏನು ಹೇಳಿದರೂ ತಾವು ಆಯಿತು, ಆಯಿತು, ಎನ್ನುತ್ತೀರಿ.

ಅಧ್ಯಕ್ಷರು: ನಿಯಮದ ಪ್ರಕಾರ ನಾನು ಕರೆದರೆ ಮಾತ್ರ ಪ್ರಶ್ನೆಯನ್ನು ಕೇಳಬೇಕಾಗಿದೆ. ನಾನು ನಿಮ್ಮನ್ನು ಕರೆದಿಲ್ಲ, ನಿಮ್ಮ ಇಷ್ಟಕ್ಕೆ ಎದ್ದು ನಿಂತು ಪ್ರಶ್ನೆಯನ್ನು ಕೇಳಬಹುದಾ? ನಾನು ನಿಮ್ಮನ್ನು ಕರೆದಿದ್ದೇನಾ? ನೀವು rules ಮಾತನಾಡಿದರೆ, ನಾನು rules ಮಾತನಾಡಬೇಕಾಗುತ್ತದೆ. ನಾನು ನಿಮ್ಮ ಹೆಸರನ್ನು ಹೇಳಿದರೆ ನೀವು ಕೇಳಬೇಕು. ನಾನು ಕರೆದರೆ ನೀವು ಪ್ರಶ್ನೆಯನ್ನು ಕೇಳಬೇಕು, ನಾನು ನಿಮ್ಮನ್ನು ಕರೆದಿಲ್ಲವಲ್ಲಾ, ನಾನು ಕರೆಯದೇ ನೀವು ಏಕೆ ಎದ್ದು ನಿಲ್ಲುತ್ತೀರಿ?

(ಗೊಂದಲ)

ಶ್ರೀ ಯು ಟಿ ಖಾದರ್: ಮಾನ್ಯ ಅಧ್ಯಕ್ಷರೆ, ನೀವು ನಮ್ಮ ರಕ್ಷಣೆಗೆ ಬರಬೇಕು. ಪ್ರಥಮ ಬಾರಿ ಸದಸ್ಯರಾದವರಿಗೆ ಅವಕಾಶ ಮಾಡಿಕೊಡಿ.

ಅಧ್ಯಕ್ಷರು: ಬೇಡಿಕೆಗಳ ಮೇಲೆ ಮಾತನಾಡುವಾಗ ಕೇಳಿ.

ಅಂಗವಿಕಲ ವೇತನ ಮಂಜೂರಾತಿಗೆ ವಾರ್ಷಿಕ ಆದಾಯ ನಿಗದಿ ಪಡಿಸುವ ಬಗ್ಗೆ.

58(395) ಶ್ರೀ ಅಭಯ ಚಂದ್ರ ಜೈನ್ ಕೆ:(ಮೂಡಬಿದ್ರೆ) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?